ಡಿ'ಸೋಜಾ ಬೋರ್‌ವೆಲ್ಸ್ (PWD Contractor)
ಫೋನ್: 2477177, 9945648718/9448348718/9986885565

ಸಾಪ್ತಾಹಿಕ
# ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಜನವರಿ 7, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 20+8+4

CENTRAL LIBRARY

## ಸಹ್ಯಾದ್ರಿ ಕಾಲೇಜಿನಲ್ಲಿ ಐದು ದಿನಗಳ ವಿಜ್ಞಾನ ಸಮ್ಮೇಳನ

# ಮೂಲವಿಜ್ಞಾನಕ್ಕೆ ಒತ್ತು ನೀಡಿ: ವಿಜ್ಞಾನಿ ಸರ್ಜ್ ಹೊರಾಕೆ

ಮಂಗಳೂರು, ಜ. 6: ಎಲ್ಲ ಆವಿಷ್ಕಾರಗಳಿಗೂ ಮೂಲವಿಜ್ಞಾನವೇ ಬುನಾದಿಯಾಗಿದ್ದು, ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕಾದ ಆವಶ್ಯಕತೆ ಇದೆ ಎಂದು ಭೌತವಿಜ್ಞಾನಿ ಸರ್ಜ್ ಹೊರಾಕೆ ಹೇಳಿದರು.

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿ ಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಶನಿವಾರ ಆರಂಭಗೊಂಡ ವಿಜ್ಞಾನ ವಿಷಯದಲ್ಲಿ 'ಸಹ್ಯಾದ್ರಿ ಸಮ್ಮೇಳನ'ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಪ್ರಸ್ತುತ ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಮೂಲವಿಜ್ಞಾನದತ್ತ ವಿದ್ಯಾರ್ಥಿ ಗಳು ಆಸಕ್ತಿ ತೋರುತ್ತಿಲ್ಲ, ಇದರಿಂದಾಗಿ ಅನೇಕ ಪ್ರತಿಭೆಗಳು ವಿಜ್ಞಾನದಿಂದ ವಿಮುಖವಾಗುತ್ತಿವೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ, ರಾಜ ಕಾರಣಿಗಳು ಗಮನ ನೀಡಬೇಕು ಎಂದು ಸಲಹೆ ನೀಡಿದರು.

ಹಿಂದೆ ವಿಜ್ಞಾನಿಗಳು ಮಾಡಿದ ಸಂಶೋಧನೆಯ ಬಗ್ಗೆ ಹೆಚ್ಚು ತಿಳಿದುಕೊಳ್ಳುವುದಕ್ಕಿಂತ ಹೊಸತಾಗಿ ಏನಾದರೂ ಸಾಧಿ ಸುವ ಹಂಬಲ ವಿದ್ಯಾರ್ಥಿಗಳಲ್ಲಿ ಬೆಳೆಯಬೇಕು. ವಿಜ್ಞಾನವನ್ನು ಕೇವಲ ವೃತ್ತಿಯಾಗಿ ನೋಡಬಾರದು. ಅದೊಂದು ಆಸಕ್ತಿಯ ವಿಷಯ ಆಗಬೇಕು ಎಂದರು.

ರಸಾಯನಶಾಸ್ತ್ರ ವಿಜ್ಞಾನಿ ಅಡಾ ಈ ಎನೋಥ್ ಮಾತನಾಡಿ, ಭಾರತೀಯ ವಿಜ್ಞಾನಿಗಳಲ್ಲಿ ಅಪಾರ ಜ್ಞಾನವಿದೆ. ಅವರಲ್ಲಿ ಇರುವ ಸೌಜನ್ಯ, ಧೈರ್ಯ ಎಲ್ಲರಿಗೂ ಮಾದರಿ. ಜೀವಕೋಶಗಳ ಸಂಶೋಧನಾ ಕ್ಷೇತ್ರಕ್ಕೆ ಭಾರತೀಯ ವಿಜ್ಞಾನಿ ಜಿ.ಎನ್. ರಾಮಚಂದ್ರನ್ ಅವರ ಕೊಡುಗೆ ಅಪಾರವಾದುದು. ನನ್ನ ಪಿಎಚ್‌ಡಿ ಅಧ್ಯಯನಕ್ಕೆ ರಾಮಚಂದ್ರನ್ ಅವರ ಸಂಶೋಧನಾ ವರದಿ ಸಹಕಾರಿಯಾಯಿತು ಎಂದು ತಿಳಿಸಿದರು.


ಸಹ್ಯಾದ್ರಿ ಕಾಲೇಜಿನಲ್ಲಿ ವಿಜ್ಞಾನ ಸಮ್ಮೇಳನವನ್ನು ರಾಮಕೃಷ್ಣ ಮಠದ ಶ್ರೀ ಜಿತಕಾಮಾನಂದ ಸ್ವಾಮೀಜಿ ಉದ್ಘಾಟಿಸಿದರು.

### ಅಭೂತಪೂರ್ವ ಪ್ರಗತಿ: ರಾಯರೆಡ್ಡಿ

ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಮಾತನಾಡಿ, ಭಾರತ ಕಳೆದ ಐದು ದಶಕದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭೂತ ಪೂರ್ವ ಪ್ರಗತಿ ಸಾಧಿಸಿದೆ. ರಾಜ್ಯ ಸರಕಾರವೂ ವಿಶೇಷ ಯೋಜನೆಗಳನ್ನು ರೂಪಿಸಿ ವಿದ್ಯಾರ್ಥಿಗಳು ವಿಜ್ಞಾನದ ಕಡೆಗೆ ಹೆಚ್ಚಿನ ಒಲವು ತೋರಿಸುವಂತೆ ಉತ್ತೇಜನ ನೀಡುತ್ತಿದೆ. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯು ವಿಜ್ಞಾನ ಸಮ್ಮೇಳನ ಆಯೋಜಿಸುವ ಮೂಲಕ ವಿಜ್ಞಾನ, ತಂತ್ರಜ್ಞಾನ, ವ್ಯವಹಾರಡಳಿತ ವಿಷಯಗಳ ಕಡೆಗೆ ವಿದ್ಯಾರ್ಥಿಗಳಿಗೆ ಆಸಕ್ತಿ ಮೂಡಿಸಿ, ಸಂಶೋಧನೆಯ ಕಡೆಗೆ ಪ್ರೇರೇಪಣೆಗೊಳಿಸುತ್ತಿರುವುದು ಶ್ಲಾಘನೀಯ ಎಂದರು.

ರಾಮಕೃಷ್ಣಮಠದ ಅಧ್ಯಕ್ಷ ಶ್ರೀ ಜಿತಕಾಮಾನಂದ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸಿದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ। ಮಂಜುನಾಥ ಭಂಡಾರಿ ಸಮ್ಮೇಳನದ ಉದ್ದೇಶವನ್ನು ವಿವರಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಮ್, ಸಹ್ಯಾದ್ರಿ ಕಾಲೇಜಿನ ನಿರ್ದೇಶಕ ಡಾ। ಡಿ.ಎಲ್. ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಅಲಹಾಬಾದ್ ಐಐಐಟಿ ನಿವೃತ್ತ ನಿರ್ದೇಶಕ ಡಾ। ಎಂ.ಡಿ. ತಿವಾರಿ, ಉದ್ಯಮಿ ಶಶಿಕಿರಣ ಶೆಟ್ಟಿ ಮುಖ್ಯ ಅತಿಥಿಯಾಗಿದ್ದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ। ಉಮೇಶ್ ಎಂ. ಭೂಷಿ ಸ್ವಾಗತಿಸಿದರು. ಸಮ್ಮೇಳನದ ಸಂಯೋಜಕ ಡಾ। ಸಿ.ಕೆ. ಮಂಜುನಾಥ್ ಪ್ರಸ್ತಾವನೆಗೈದರು. ಸಹ್ಯಾದ್ರಿ ಕಾಲೇಜಿನ ಎಂಬಿಎ ವಿಭಾಗದ ನಿರ್ದೇಶಕಿ ಡಾ। ವಿಶಾಲ್ ಸಮರ್ಥ ವಂದಿಸಿದರು.

ಜ.10ರ ತನಕ ನಡೆಯುವ ಕಾರ್ಯಕ್ರಮದಲ್ಲಿ ನೊಬೆಲ್ ಪುರಸ್ಕೃತರು, ವಿಜ್ಞಾನಿಗಳು, ತಾಂತ್ರಿಕ ಪರಿಣತರು ಹಾಗೂ ಉದ್ಯಮಿಗಳು ಜತೆ ಚರ್ಚಾಗೋಷ್ಠಿ ನಡೆಯಲಿದೆ.

ಮುಂಜಾನೆ ಮಾತು
ನಮ್ಮ ಕನಸುಗಳು ಉಸಿರಾಡಲು ವಿಶ್ವಾಸ ಮುಖ್ಯ. ಅದರಲ್ಲೂ ನಮ್ಮ ಶಕ್ತಿಯ ಬಗ್ಗೆ ನಂಬಿಕೆ ಹೆಚ್ಚಿಸಿಕೊಂಡಷ್ಟೂ ಕನಸಿಗೆ ಕಸುವು ಜಾಸ್ತಿ.

ವಿಜಯವಾಣಿ
ಕನ್ನಡಿಗರ ಧ್ವನಿ
2018 ಹೊಸ ವರುಷ ತರಲಿ ಹರುಷ
ನಂ.1* ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 6 ● ಸಂಚಿಕೆ 279
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 7 ಜನವರಿ 2018 | ಭಾನುವಾರ

CENTRAL LIBRARY

# ಜಾಗತಿಕ ತಾಪಮಾನ ಸವಾಲು

## ಸಹ್ಯಾದ್ರಿ ವಿಜ್ಞಾನ ಸಮ್ಮೇಳನದಲ್ಲಿ ನೊಬೆಲ್ ಪುರಸ್ಕೃತರ ವಿಜ್ಞಾನಿಗಳ ಅಭಿಪ್ರಾಯ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಮೂಲ ವಿಜ್ಞಾನದ ಕಡೆಗೆ ವಿದ್ಯಾರ್ಥಿಗಳು ಹೆಚ್ಚಿನ ಆದ್ಯತೆ ನೀಡುವ ಮೂಲಕ ಪ್ರಸ್ತುತ ಸವಾಲಾಗಿರುವ ಜಾಗತಿಕ ತಾಪಮಾನ, ಆರೋಗ್ಯ ವಿಜ್ಞಾನ ಮೊದಲಾದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ನೊಬೆಲ್ ಪುರಸ್ಕೃತ ಫ್ರಾನ್ಸ್‌ನ ಭೌತಶಾಸ್ತ್ರಜ್ಞ ಸೆರ್ಗೆ ಹೊರೋಚ್ ಹೇಳಿದರು.

ಸಹ್ಯಾದ್ರಿ ಕಾಲೇಜು ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಶನಿವಾರ ಆರಂಭಗೊಂಡ ವಿಜ್ಞಾನ ವಿಷಯದ ಸಹ್ಯಾದ್ರಿ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಜಾಗತಿಕ ತಾಪಮಾನ ಇಂದಿನ ಸವಾಲಾಗಿದ್ದು, ವಿಜ್ಞಾನಿಗಳು, ಸರ್ಕಾರದ ಪ್ರತಿನಿಧಿಗಳು ಚರ್ಚಿಸಿ ಇದರ ನಿವಾರಣೆಗೆ ಕ್ರಮ ಕೈಗೊಳ್ಳಬೇಕಾಗಿದೆ. ಯುವ ಜನತೆ ಉದ್ಯಮ ಕ್ಷೇತ್ರಗಳತ್ತ ಹೆಚ್ಚು ಆಸಕ್ತರಾಗುತ್ತಿದ್ದಾರೆ. ಮೂಲ ವಿಜ್ಞಾನ ಅಧ್ಯಯನದ ಕಡೆಗೆ ಒಲವು ತೋರಿಸಬೇಕು. ಉದ್ಯಮ ಕ್ಷೇತ್ರದಲ್ಲಿ ಸಿಗುವ ಮನ್ನಣೆ ವಿಜ್ಞಾನಿಗಳಿಗೆ ಲಭಿಸಿದಾಗ ವಿದ್ಯಾರ್ಥಿಗಳು ಈ ಕಡೆಗೆ ಗಮನ ನೀಡಲು ಸಾಧ್ಯ. ಈ ನಿಟ್ಟಿನಲ್ಲಿ ಶ್ರಮಿಸಬೇಕಾಗಿದೆ ಎಂದರು.

ರಸಾಯನ ಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಇಸ್ರೇಲ್‌ನ ಅಡಾ ಇ. ಯೋನತ್ ಮಾತನಾಡಿ, ಭಾರತೀಯ ವಿಜ್ಞಾನಿ ಜಿ.ಎನ್. ರಾಮಚಂದ್ರನ್ ತನ್ನ ವಿಜ್ಞಾನದ ಸಂಶೋಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹ ನೀಡಿದ್ದರು. ಹಾಗಾಗಿ ಭಾರತ, ಭಾರತೀಯ ವಿಜ್ಞಾನಿಗಳ ಮೇಲೆ ವಿಶೇಷ ಗೌರವ ಹೊಂದಿದ್ದೇನೆ. 1970ರಲ್ಲಿ ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡಿದ್ದು, ಆ ಬಳಿಕ ಹಲವು ಬಾರಿ ಭೇಟಿ ನೀಡಿದ್ದೇನೆ ಎಂದರು.

ರಾಮಕೃಷ್ಣ ಮಠದ ಅಧ್ಯಕ್ಷ ಶ್ರೀ ಜಿತಕಾಮಾನಂದ ಸ್ವಾಮೀಜಿ ಸಮ್ಮೇಳನ ಉದ್ಘಾಟಿಸಿದರು. ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಸಮ್ಮೇಳನದ ಉದ್ದೇಶ ವಿವರಿಸಿದರು.

ಸಹ್ಯಾದ್ರಿ ಕಾಲೇಜಿನ ನಿರ್ದೇಶಕ ಡಾ.ಡಿ.ಎಲ್.ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್. ಸೀತಾರಾಮ್, ಅಲಹಾಬಾದ್ ಐಐಐಟಿ ನಿವೃತ್ತ ನಿರ್ದೇಶಕ ಡಾ.ಎಂ.ಡಿ.ತಿವಾರಿ, ಉದ್ಯಮಿ ಶಶಿಕಿರಣ ಶೆಟ್ಟಿ ಉಪಸ್ಥಿತರಿದ್ದರು. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಡಾ.ಉಮೇಶ್ ಎಂ.ಭೂಷಿ ಸ್ವಾಗತಿಸಿದರು. ಸಮ್ಮೇಳನದ ಸಂಯೋಜಕ ಡಾ.ಸಿ.ಕೆ.ಮಂಜುನಾಥ್ ಪ್ರಸ್ತಾವನೆಗೈದರು. ಸಹ್ಯಾದ್ರಿ ಕಾಲೇಜಿನ ಎಂಬಿಎ ವಿಭಾಗದ ನಿರ್ದೇಶಕ ಡಾ.ವಿಶಾಲ್ ಸಮರ್ಥ ವಂದಿಸಿದರು.



ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆರಂಭಗೊಂಡ ವಿಜ್ಞಾನ ವಿಷಯದ ಸಹ್ಯಾದ್ರಿ ಸಮ್ಮೇಳನವನ್ನು ರಾಮಕೃಷ್ಣ ಮಠದ ಶ್ರೀ ಜಿತಕಾಮಾನಂದ ಸ್ವಾಮೀಜಿ ಉದ್ಘಾಟಿಸಿದರು. ನೊಬೆಲ್ ಪುರಸ್ಕೃತರಾದ ಸೆರ್ಗೆ ಹೊರೋಚ್, ಅಡಾ ಇ. ಯೋನತ್, ಸಚಿವರಾದ ಬಸವರಾಜ ರಾಯರಡ್ಡಿ, ಎಂ.ಆರ್. ಸೀತಾರಾಮ್, ಸಂಸ್ಥೆ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮತ್ತಿತರರಿದ್ದರು ಉಪಸ್ಥಿತರಿದ್ದರು.

### ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಗತಿ

ದೇಶ ಕಳೆದ ಐದು ದಶಕದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದೆ. ರಾಜ್ಯ ಸರ್ಕಾರವೂ ವಿಶೇಷ ಯೋಜನೆಗಳನ್ನು ರೂಪಿಸಿ ವಿದ್ಯಾರ್ಥಿಗಳು ವಿಜ್ಞಾನದ ಕಡೆಗೆ ಹೆಚ್ಚಿನ ಒಲವು ತೋರಿಸುವಂತೆ ಉತ್ತೇಜನ ನೀಡುತ್ತಿದೆ.

| ಬಸವರಾಜ ರಾಯರಡ್ಡಿ, ಉನ್ನತ ಶಿಕ್ಷಣ ಸಚಿವ

### ವಿಜ್ಞಾನಿಗಳೊಂದಿಗೆ ಚರ್ಚಾಗೋಷ್ಠಿ

ಜ.10ರ ತನಕ ನಡೆಯುವ ಕಾರ್ಯಕ್ರಮದಲ್ಲಿ ನೊಬೆಲ್ ಪುರಸ್ಕೃತರು, ವಿಜ್ಞಾನಿಗಳು, ತಾಂತ್ರಿಕ ಪರಿಣಿತರು ಹಾಗೂ ಉದ್ಯಮಿಗಳು ಜತೆ ಚರ್ಚಾಗೋಷ್ಠಿ ನಡೆಯಲಿದೆ. ಪ್ರಸ್ತುತ ತಾಂತ್ರಿಕತೆ ಕುರಿತು ಹೆಸರಾಂತ ಉಪನ್ಯಾಸಕರು ಹಾಗೂ ತಾಂತ್ರಿಕ ನೈಪುಣ್ಯರ ತಾಂತ್ರಿಕ ಚರ್ಚೆ. ಬೆಳಗ್ಗೆ 8.30ರಿಂದ ಸಾಯಂಕಾಲ 5 ಗಂಟೆಯವರೆಗೆ ವಿಜ್ಞಾನ ಮಾದರಿ ವಸ್ತು ಪ್ರದರ್ಶನ, ತಾಂತ್ರಿಕ ವಸ್ತುಪ್ರದರ್ಶನ, ಗಣಿತ ವಸ್ತು ಪ್ರದರ್ಶನ, ಏರ್ ಶೋ, ಡ್ರೋಣ್‌ಗಳ ಪ್ರದರ್ಶನ ನಡೆಯಲಿದೆ.


“ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕಡೆಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಸರ್ಕಾರ ಸಂಚಾರ ತಾರಾಲಯ ಯೋಜನೆ ಹಮ್ಮಿಕೊಂಡು ಕಾರ್ಯ ತತ್ಪರವಾಗಿದೆ. ಎಲ್ಲ ಸರ್ಕಾರಿ ಪ್ರೌಢಶಾಲೆಗಳಿಗೆ ಈ ಸಂಚಾರ ತಾರಾಲಯ ಭೇಟಿ ನೀಡಲಿದೆ. ರಾಜ್ಯ ಸರ್ಕಾರ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಹತ್ತರ ಕೊಡುಗೆ ನೀಡುತ್ತಿದೆ.

| ಎಂ.ಆರ್.ಸೀತಾರಾಮ್, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

“ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಕಡೆಗೆ ಆಸಕ್ತಿ ಮೂಡಿಸಲು ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಐದು ದಿನಗಳ ವಿಜ್ಞಾನ ಸಮ್ಮೇಳನ ಹಮ್ಮಿಕೊಂಡು ದಕ್ಷಿಣ ಕನ್ನಡ ಮಾತ್ರವಲ್ಲದೆ ನೆರೆಯ ಜಿಲ್ಲೆಗಳ ಪ್ರೌಢಶಾಲೆ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ಸೇರಿದಂತೆ 1200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶ ಕಲ್ಪಿಸಿದೆ. ಸಂಸ್ಥೆಯ ಇತಿಹಾಸದಲ್ಲಿ ಸ್ಮರಣೀಯ ಕಾರ್ಯಕ್ರಮ ಇದಾಗಿದೆ.

| ಡಾ.ಮಂಜುನಾಥ ಭಂಡಾರಿ, ಅಧ್ಯಕ್ಷ, ಸಹ್ಯಾದ್ರಿ ಶಿಕ್ಷಣ ಸಂಸ್ಥೆ

ಸಂಪುಟ 59 Volume | ಸಂಚಿಕೆ 323 Issue | ಪುಟ Pages 12+6
epaper.samyukthakarnataka.com
ಮಂಗಳೂರು Mangaluru | ಹುಬ್ಬಳ್ಳಿ Hubballi | ಬೆಂಗಳೂರು Bengaluru
ಸಂಯುಕ್ತ ಕರ್ನಾಟಕ
samyukthakarnataka
ಕನ್ನಡಿಗರ ಸಾಕ್ಷಿಪ್ರಜ್ಞೆ
ಎಂಟು ದಶಕದ ನಂಟು
ಭಾನುವಾರ 7 Sunday | ಜನವರಿ 2018 January | ₹ 5-00



ಸಮಾರಂಭವೊಂದರಲ್ಲಿ ಭಾಗವಹಿಸಲು ಕೌಲಾಲಂಪುರ್‌ಕ್ಕೆ ಸೂಪರ್ ಸ್ಟಾರ್ ರಜನಿಕಾಂತ್ ಭೇಟಿ ನೀಡಿದ ಕ್ಷಣ.

ಕೋಲ್ಕತ್ತಾದಲ್ಲಿ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಬಿಪಾಶಾ ಬಸು ಪಾಲ್ಗೊಂಡಿದ್ದರು.

# ವಿಜ್ಞಾನದತ್ತ ಆಸಕ್ತಿ ಬೆಳೆಸಿಕೊಳ್ಳಿ



**ಮಂಗಳೂರು:** ಇಂದು ಯುವಜನತೆ ವಿಜ್ಞಾನದತ್ತ ಆಸಕ್ತಿ ತೋರಿಸುತ್ತಿಲ್ಲ. ಉನ್ನತ ಮಟ್ಟದ ಜೀವನ ನಡೆಸಲು ವ್ಯಾಪಾರ, ಗಳಿಕೆಯ ಕ್ಷೇತ್ರದತ್ತ ಜಾಸ್ತಿ ಆಸಕ್ತಿ ವಹಿಸುತ್ತಿದ್ದಾರೆ. ಇಂದಿನ ಜನಾಂಗದವರಿಗೆ ಮೂಲ ವಿಜ್ಞಾನ ಮಾಹಿತಿ ಕೊರತೆ ಇದೆ. ಹಿರಿಯರು, ರಾಜಕೀಯ ಧುರೀಣರು ಆಸಕ್ತಿ ವಹಿಸಿ ಅವರನ್ನು ವಿಜ್ಞಾನದತ್ತ ತೊಡಗುವಂತೆ ಮಾಡಬೇಕು ಎಂದು ಫಿಸಿಕ್ಸ್‌ನಲ್ಲಿ 2012ರಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದ ಸರ್ಜ್ ಹರೋಚೆ ಹೇಳಿದರು.

ಸಹ್ಯಾದ್ರಿ ಕ್ಯಾಂಪೆಸ್‌ನಲ್ಲಿ ಜ. 6ರಿಂದ 10ರವರೆಗೆ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನೀಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಆಯೋಜಿಸಿದ 'ಸಹ್ಯಾದ್ರಿ ಕನ್‌ಕ್ಲೆವ್' ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೆಮಿಸ್ಟ್ರಿಯಲ್ಲಿ 2009ರಲ್ಲಿ ನೊಬೆಲ್ ಪ್ರಶಸ್ತಿ ಗಳಿಸಿದ ಅಡ ಇ ಯೋನತ್ ಮಾತನಾಡಿ,. ಯುವ ಜನತೆ ಇಂತ ಕಾರ್ಯಕ್ರಮಗಳ ಪ್ರಯೋಜನ ಪಡೆಯಬೇಕು ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಬಸವರಾಜ್ ರಾಯರೆಡ್ಡಿ ಮಾತನಾಡಿ, ವಿಜ್ಞಾನ, ತಂತ್ರಜ್ಞಾನ ಇಡೀ ಜಗತ್ತನ್ನು ಬದಲಾಯಿಸಿದೆ ಎಂದರು.

ಕರ್ನಾಟಕ ಸರ್ಕಾರದ ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್ ಸೀತಾರಾಮ್ ಮಾತನಾಡಿ, 'ಸಂಚಾರಿ ತಾರಾಲಯ'ದ ಮೂಲಕ 8ರಿಂದ 12ನೇ ತರಗತಿಯ ಮಕ್ಕಳಿಗೆ ವಿಜ್ಞಾನ, ತಂತ್ರಜ್ಞಾನ ಸೋಲಾರ್ ವ್ಯವಸ್ಥೆ ಮುಂತಾದ ವಿಷಯಗಳನ್ನು ಕಲಿಸಲಾಗುತ್ತಿದೆ. ಫೆಬ್ರವರಿಯಲ್ಲಿ ಪಿಲಿಕುಳದಲ್ಲಿ 42 ಕೋಟಿ ರೂ ವೆಚ್ಚದಲ್ಲಿ 3ಡಿ ಪ್ಲಾಂಟೇಶನ್ ಪ್ರಾರಂಭವಾಗಲಿದೆ ಎಂದರು.

'ಸಹ್ಯಾದ್ರಿ ಕನ್‌ಕ್ಲೆವ್'ನ್ನು ರಾಮಕೃಷ್ಣ ಮಠ ಮಂಗಳೂರು ಇದರ ಅಧ್ಯಕ್ಷ ಶ್ರೀ ಜಿತಕಾಮಾನಂದಜಿ ಉದ್ಘಾಟಿಸಿದರು. ಭಂಡಾರಿ ಫೌಂಡೇಶನ್ ಅಧ್ಯಕ್ಷ ಮಂಜುನಾಥ ಭಂಡಾರಿ ಕಾರ್ಯಕ್ರಮದ ಬಗ್ಗೆ ತಿಳಿಸಿದರು. ಅಲಹಾಬಾದ್ ಐ.ಐ.ಐ.ಟಿ ಮಾಜಿ ನಿರ್ದೇಶಕ ಎಂ.ಡಿ ತಿವಾರಿ, ಮುಂಬಯಿ ಆಲ್‌ಕಾರ್ಗೊ ಲೊಜಿಸ್ಟಿಕ್ಸ್ ಸಂಸ್ಥಾಪಕ ಮತ್ತು ಅಧ್ಯಕ್ಷ ಶಶಿಕಿರಣ್ ಶೆಟ್ಟಿ ಮಾತನಾಡಿದರು. 'ಸಹ್ಯಾದ್ರಿ ಕನ್‌ಕ್ಲೆವ್' ಸಂಯೋಜಕ ಡಾ.ಸಿ.ಕೆ ಮಂಜುನಾಥ್ ಕಾರ್ಯಕ್ರಮದ ರೂಪುರೇಷೆ ಬಗ್ಗೆ ತಿಳಿಸಿದರು.

www.varthabharati.in
ಜನದನಿಯ ಸಾರಥಿ
epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗೆ

◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ
7 ಜನವರಿ 2018
ರವಿವಾರ
VARTHABHARATHI KANNADA DAILY

/Varthabharati REGD NO: MNG/958/2016-18 RNI NO: KAR KAN/2003/11378 ● ಸಂಪುಟ 15 ● ಸಂಚಿಕೆ 129 ● ಮಂಗಳೂರು ● ಪುಟ 12+4 ● ಬೆಲೆ ರೂ. 5

UDUPI : Kadiyali,
MANGALORE : Nanthoor,
SHIMOGA : BH Road,

# ಜಾಗತಿಕ ಸವಾಲು ಎದುರಿಸಲು ವಿಜ್ಞಾನದ ಸಮರ್ಪಕ ಬಳಕೆ ಮಾಡಬೇಕಾಗಿದೆ: ಸರ್ಜ್ ಹ್ಯಾರೋಚೆ

■ ವಿಜ್ಞಾನ-ತಂತ್ರಜ್ಞಾನಕ್ಕೆ ಸಂಬಂಧಿಸಿ 'ಸಹ್ಯಾದ್ರಿ ಎನ್‌ಕ್ಲೇವ್' ಕಾರ್ಯಾಗಾರ

■ ಸಮಾವೇಶದಲ್ಲಿ ಅಂತಾರಾಷ್ಟ್ರೀಯ, ನೊಬೆಲ್ ಪುರಸ್ಕೃತ ವಿಜ್ಞಾನಿಗಳ ಪಾಲ್ಗೊಳ್ಳುವಿಕೆ

ಮಂಗಳೂರು, ಜ.6: ಮನುಕುಲದ ಮುಂದಿರುವರುವ ಜಾಗತಿಕ ಸವಾಲುಗಳನ್ನು ಎದುರಿಸಲು ವಿಜ್ಞಾನವನ್ನು ಸಮರ್ಪಕ ರೀತಿಯಲ್ಲಿ ಬಳಕೆ ಮಾಡಬೇಕಾಗಿದೆ ಎಂದು ನೊಬೆಲ್ ಪ್ರಶಸ್ತಿ ವಿಜೇತ ಭೌತಶಾಸ್ತ್ರದ ವಿಜ್ಞಾನಿ ಸರ್ಜ್ ಹ್ಯಾರೋಚೆ ಹೇಳಿದರು.

ಭಾರತ ಸರಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ರಾಜ್ಯ ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿ ಸಮಿತಿ, ರಾಜ್ಯ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ, ವಿಟಿಯು, ಮಂಗಳೂರು ವಿ.ವಿ. ಹಾಗೂ ಬೆಂಗಳೂರಿನ ರಾಮಯ್ಯ ತಂತ್ರಜ್ಞಾನ ಸಂಸ್ಥೆಯ ಸಹಯೋಗದೊಂದಿಗೆ ನಗರದ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜ.6ರಿಂದ 10 ರವರೆಗೆ ಹಮ್ಮಿಕೊಂಡಿರುವ ವಿಜ್ಞಾನ-ತಂತ್ರಜ್ಞಾನ-ಆಡಳಿತ ನಿರ್ವಹಣೆಗೆ ಸಂಬಂಧಿಸಿದ 'ಸಹ್ಯಾದ್ರಿ ಎನ್‌ಕ್ಲೇವ್' ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ವಿಜ್ಞಾನ ಎಂದರೆ ಆವಿಷ್ಕಾರ. ನಮ್ಮ ಮಿದುಳಿನಲ್ಲಿ ಆವಿಷ್ಕಾರದ ಚಿಂತನೆ ಮೂಡಬೇಕಾಗಿದೆ. ಆವಿಷ್ಕಾರದಲ್ಲಿ ಸಿಗುವ ಆನಂದವನ್ನು ವಿಜ್ಞಾನದಿಂದ ಸಿಗುವ ತೃಪ್ತಿ ಎನ್ನಬಹುದು. ಮೂಲ ವಿಜ್ಞಾನದಲ್ಲಿ ಆಸಕ್ತಿ ಬೆಳೆಸಿಕೊಂಡರೆ ಹೊಸ ರೀತಿಯ ಹುಡುಕಾಟಕ್ಕೆ ನಮ್ಮನ್ನು ಸಜ್ಜುಗೊಳಿಸಬಹುದು ಎಂದು ಸರ್ಜ್ ಹ್ಯಾರೋಚೆ ತಿಳಿಸಿದ್ದಾರೆ.

**ಸಹ್ಯಾದ್ರಿ ಕಾನ್‌ಕ್ಲೇವ್ ಉದ್ಘಾಟನೆ:** ರಾಜ್ಯದ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಸಹ್ಯಾದ್ರಿ ಕಾನ್‌ಕ್ಲೇವ್ ಉದ್ಘಾಟಿಸಿ ಮಾತನಾಡುತ್ತಾ, ವಿಜ್ಞಾನ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆ ಮಾನವನ ಬದುಕಿನಲ್ಲಿ ಸಾಕಷ್ಟು ಬದಲಾವಣೆಗೆ ಕಾರಣವಾಗಿದೆ. ನಮ್ಮ ಬದುಕನ್ನು ಉತ್ತಮಗೊಳಿಸಲು ಕಾರಣವಾಗಿದೆ. ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿಗಳು ಸೇರಿದಂತೆ ಜಗತ್ತಿನ ಮಹಾನ್ ವಿಜ್ಞಾನಿಗಳನ್ನು ಒಂದು ಕಡೆ ಸೇರಿಸಿ ಅವರೊಂದಿಗೆ ಯುವ ವಿಜ್ಞಾನಿಗಳು, ತಂತ್ರಜ್ಞರು ತಮ್ಮ ಅನುಭವಗಳನ್ನು ಹೆಚ್ಚಿಸಿಕೊಳ್ಳಲು ಒಳ್ಳೆಯ ಅವಕಾಶ. ಅದಕ್ಕಾಗಿ ಸಹ್ಯಾದ್ರಿ ಸಂಸ್ಥೆಯ ಸಂಘಟಕರನ್ನು ಅಭಿನಂದಿಸುವುದಾಗಿ ಅವರು ತಿಳಿಸಿದರು.

ವಸ್ತುಪ್ರದರ್ಶನವನ್ನು ಉದ್ಘಾಟಿಸಿದ ರಾಜ್ಯ ವಿಜ್ಞಾನ ತಂತ್ರಜ್ಞಾನ, ಯೋಜನೆ ಮತ್ತು ಅಂಕಿ ಅಂಶ ಖಾತೆಯ ಸಚಿವ ಎಂ.ಆರ್.ಸೀತಾರಾಮ ಮಾತನಾಡುತ್ತಾ, ರಾಜ್ಯದಲ್ಲಿ ಖಗೋಳದ ಬಗ್ಗೆ ಮಾಹಿತಿ ನೀಡಲು ಮೊಬೈಲ್ ಪ್ಲಾನಿಟೋರಿಯಂಗೆ ಚಾಲನೆ ನೀಡಲಾಗಿದೆ. ಸಹ್ಯಾದ್ರಿಗೂ ಈ ಸಂಚಾರಿ ತಾರಾಲಯ ಆಗಮಿಸಿದೆ. ಮಂಗಳೂರಿನ ಪಿಲಿಕುಳದಲ್ಲಿ 42 ಕೋ.ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಿಜಿಟಲ್ ತಾರಾಲಯ ಫೆಬ್ರವರಿ ತಿಂಗಳಲ್ಲಿ ಉದ್ಘಾಟನೆಯಾಗಲಿದೆ ಎಂದು ಸಮಾರಂಭಕ್ಕೆ ಶುಭ ಹಾರೈಸಿದರು.

ಶ್ರೀರಾಮಕೃಷ್ಣ ಮಠದ ಮುಖ್ಯಸ್ಥರಾದ ಸ್ವಾಮಿ ಜಿತಕಾಮಾನಂದಾಜಿ ದೀಪ ಬೆಳಗಿಸಿ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಭಂಡಾರಿ ಫೌಂಡೇಶನ್‌ನ ಅಧ್ಯಕ್ಷ ಮಂಜುನಾಥ ಭಂಡಾರಿ, ಸಂಸ್ಥೆಯ ಟ್ರಸ್ಟಿಗಳಾದ ದೇವದಾಸ ಹೆಗ್ಡೆ, ಜಗನ್ನಾಥ ಚೌಟ ಹಾಗೂ ಅತಿಥಿಗಳಾದ ಪ್ರಜ್ವಲ್ ಭೈರಪ್ಪ, ಸತೀಶ್ ತ್ರಿಪಾಠಿ, ರಾಬರ್ಟ್‌ಸನ್, ಅನೀಶ್ ಆರೋರಾ, ಸತ್ಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ.ಉಮೇಶ್ ಎಂ. ಬೂಶಿ ಸ್ವಾಗತಿಸಿದರು. ಉದ್ಯಮಿ ಅಲ್‌ಕಾರ್ಗೋ ಸಂಸ್ಥೆಯ ಅಧ್ಯಕ್ಷ ಶಶಿಕಿರಣ್ ಶೆಟ್ಟಿ ಶುಭಹಾರೈಸಿದರು. ಸಹ್ಯಾದ್ರಿ ಕಾಲೇಜಿನ ನಿರ್ದೇಶಕ ಡಾ.ಡಿ.ಎಲ್. ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು.



## ಭಾರತದ ವಿಜ್ಞಾನ ಕ್ಷೇತ್ರದಲ್ಲಿ ದೈತ್ಯ ಪ್ರತಿಭೆಗಳಿವೆ

ತನಗೆ ಮಾರ್ಗದರ್ಶನ ಮಾಡಿದ ಚೆನ್ನೈನ ರಾಮಚಂದ್ರನ್ ಅತ್ಯಂತ ಪ್ರತಿಭಾವಂತ ವಿಜ್ಞಾನಿ ಎಂದು ರಸಾಯನ ಶಾಸ್ತ್ರ ವಿಜ್ಞಾನದಲ್ಲಿ 1968ರಲ್ಲಿ ನೊಬೆಲ್ ಪ್ರಶಸ್ತಿ ವಿಜೇತ ಆ್ಯಡಾ ಇ.ಯೋನಾಥ್ ತಿಳಿಸಿದ್ದಾರೆ.

ನಾನು ವಿಜ್ಞಾನ ಕ್ಷೇತ್ರದಲ್ಲಿ ಈಗಿನ ಎತ್ತರಕ್ಕೆ ಏರಲು ಭಾರತದ ಮದ್ರಾಸಿನಲ್ಲಿದ್ದ ರಾಮಚಂದ್ರನ್‌ರಂತಹ ಪ್ರತಿಭಾವಂತ ವಿಜ್ಞಾನಿ ಗಳು ನನಗೆ ಮಾರ್ಗದರ್ಶನ ಮಾಡಿ, ಪ್ರೋತ್ಸಾಹಿಸುತ್ತಿದ್ದುದೇ ಕಾರಣ. ಅವರಲ್ಲಿ ತಾಳ್ಮೆ ಇತ್ತು, ಪ್ರತಿಭೆ ಇತ್ತು. ಅಲ್ಲದೆ ಅವರು ಪ್ರಾಮಾಣಿಕತನವೂ ಕೂಡಿದ್ದ ಮಹಾನ್ ವಿಜ್ಞಾನಿ ಯಾಗಿದ್ದರು ಎಂದು ಭಾರತೀಯ ವಿಜ್ಞಾನಿ ರಾಮಚಂದ್ರನ್ ಬಗ್ಗೆ ಯೊನಾಥ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಾನು ಈ ಹಿಂದೆ ಮದ್ರಾಸಿಗೆ ಭೇಟಿ ನೀಡಿದ್ದೆ ಆ ಸಂದರ್ಭದಲ್ಲಿ ಏರ್‌ಪೋರ್ಟ್ ಬಳಿ ನನ್ನ ಬಳಿ ಇದ್ದ ವಸ್ತುಗಳು ಕಳವಾಯಿತು. ಆದರೆ ಇಲ್ಲಿನ ಜನರ ಸ್ನೇಹ ಪರ ಮನೋಭಾವ ನನಗೆ ಮೆಚ್ಚುಗೆಯಾಗಿದೆ. ಆ ಕಾರಣದಿಂದ ನನಗೆ ಭಾರತ ಅಂದರೆ ಪ್ರೀತಿ. ಇಲ್ಲಿನ ವಿಜ್ಞಾನ -ವಿಜ್ಞಾನಿಗಳು ಅಂದರೆ ಪ್ರೀತಿ. ಜೊತಗೆ ಇಲ್ಲಿನ ಬಾಲಿವುಡ್ ಸಿನಿಮಾ ಅಂದರೂ ಇಷ್ಟ ಎಂದು ಯೋನಾಥ್ ತಿಳಿಸಿದ್ದಾರೆ.

> ಜಾಗತಿಕ ತಾಪಮಾನ ಹೆಚ್ಚಳದ ಸಮಸ್ಯೆ ವಿಶ್ವದ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಅಲ್ಲದೆ ಮನುಷ್ಯನನ್ನು ಕಾಡುವ ಹೊಸ ಹೊಸ ಮಾರಕ ರೋಗಗಳ ಬಗ್ಗೆ ವಿಜ್ಞಾನದಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕಾಗಿರುವುದು ಜಗತ್ತಿನ ಎಲ್ಲಾ ದೇಶಗಳ ಮುಂದಿರುವ ಸವಾಲಾಗಿದೆ. ಇಂದು ಮೂಲ ವಿಜ್ಞಾನದ ಬಗೆಗಿನ ಆಸಕ್ತಿ ಕಡಿಮೆಯಾಗುತ್ತಿದೆ. ಈ ಸಮಸ್ಯೆ ಭಾರತ ಮಾತ್ರವಲ್ಲ ವಿಶ್ವದ ಎಲ್ಲಾ ಕಡೆ ಕಂಡು ಬರುತ್ತಿದೆ. ಆದ್ದರಿಂದ ಮೂಲ ವಿಜ್ಞಾನದ ಬಗ್ಗೆ ಆಸಕ್ತಿವಹಿಸಲು ಯುವ ಜನತೆಗೆ ಪ್ರೇರಣೆ ನೀಡಬೇಕಾಗಿದೆ. ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಬೇಕಾದರೆ ಆಸಕ್ತಿ ಮತ್ತು ಹೊಸತನ್ನು ಹುಡುಕುವ ಪ್ರವೃತ್ತಿ ಅತ್ಯಗತ್ಯ.
>
> ■ ಸರ್ಜ್ ಹ್ಯಾರೋಚೆ
> ನೊಬೆಲ್ ಪ್ರಶಸ್ತಿ ವಿಜೇತ ವಿಜ್ಞಾನಿ

New signing Virgil Van Dijk scores on his debut as Liverpool thump Everton in Merseyside derby to advance to FA cup fourth round P 18

SUNDAY TIMES OF INDIA

Bennett, Coleman & Co. Ltd.

MANGALURU

JANUARY 7, 2018 | PAGES 24 | INCLUDING TIMESLIFE! | TIMESOFINDIA.COM | EPAPER.TIMESOFINDIA.COM


# Need to revive interest in basic science subjects, says Nobel laureate

TIMES NEWS NETWORK

**Mangaluru:** There is a need to revive interest in basic science as demand for the subject is diminishing, rued 2012 Nobel laureate and physicist Serge Haroche.

Serge was in the city to inaugurate Sahyadri Conclave on Science, Technology and Management at Sahyadri College of Engineering and Management on Saturday. The conclave will conclude on January 10. Serge, who was sharing the dais with another Nobel laureate in Chemistry Ada E Yonath, said the number of aspirants taking up basic sciences has decreased significantly. "While some of them go for applied sciences, others prefer to become entrepreneurs," he said, adding that there is pleasure in discovering a new thing than receiving a Nobel prize.

**SAHYADRI CONCLAVE**



TOI

**THOUGHTFUL:** Ada E Yonath, Nobel laureate in chemistry speaks at the Sahyadri Conclave in Mangaluru on Saturday

"People who become scientists and get involved in research activities are neglected as it is not a lucrative career. So it is the duty of politicians and policy makers to give due importance to such talents (scientists). I think it's a serious issue in India as well as the rest of the world," he added.

**'Have high regards for India'**

Nobel laureate Ada E Yonath recalled her association with G N Ramachandran, an Indian physicist. "When I was a learner, he (Ramachandran) despite being the biggest scientist of that time had recognized my work in the field of Collagen. So I love India, Indian scientists and as well science here," she said.

**Opportunity for students**

The conclave provides an opportunity to the young generation to meet and interact with Noble laureates, internationally renowned scientists and industrialists. The primary purpose of the conclave is to instill in the student participants the spirit of scientific inquiry via motivational interactions with Nobel laureates and scientists. It will also help them in career guidance towards science and technology. About 1,200 students taking part in the conclave.

ಭಾನುವಾರ,7 ಜನವರಿ 2018 | ಪುಟಗಳು: 18+6+6(P4+4) | ಬೆಲೆ: ₹ 5.00
VK
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ
www.vijaykarnataka.com
ಸಂಪುಟ: 17 | ಸಂಚಿಕೆ: 162
ವಿಜಯ ಕರ್ನಾಟಕ



ಮೊದಲ ಟೆಸ್ಟ್: ಭಾರತ 209ಕ್ಕೆ ಆಲೌಟ್
ಗೌರವ ಕಾಪಾಡಿದ ಹಾರ್ದಿಕ್ ಪಾಂಡ್ಯ P17



ಜೇಟ್ಲಿ ಟ್ವೀಟ್ ವಿವಾದದಲ್ಲಿ ರಾಹುಲ್ ಗಾಂಧಿ ವಿರುದ್ಧ ಹಕ್ಕುಚ್ಯುತಿ ನೋಟಿಸ್: ರಾಜ್ಯಸಭೆಯಿಂದ ಲೋಕಸಭೆಗೆ ರವಾನೆ P12

ಮರುನಿರ್ಮಾಣಗೊಳ್ಳಲಿದೆ ರಾತ್ ಔರ್ ದಿ
ಐಶ್ವರ್ಯ ರೈಗೆ 10 ಕೋಟಿ ರೂ. ಸಂಭಾವ

# ಹೊಸ ಆವಿಷ್ಕಾರಕ್ಕೆ ಮೂಲ ವಿಜ್ಞಾನವೇ ಬುನಾದಿ

## 'ಸಹ್ಯಾದ್ರಿ ಸಮಾವೇಶ'ದಲ್ಲಿ ನೋಬೆಲ್ ಪ್ರಶಸ್ತಿ ವಿಜೇತ ಸರ್ಜ್ ಹೊರಾಕೆ

**ವಿಕ ಸುದ್ದಿಲೋಕ** ಮಂಗಳೂರು

ಜಗತ್ತಿನ ಎಲ್ಲ ಹೊಸ ಆವಿಷ್ಕಾರಗಳಿಗೆ ಮೂಲ ವಿಜ್ಞಾನವೇ ಬುನಾದಿಯಾಗಿದ್ದು, ಮೂಲ ವಿಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡುವ ಅಗತ್ಯವಿದೆ ಎಂದು ನೋಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿ ಸರ್ಜ್ ಹೊರಾಕೆ ಹೇಳಿದರು.

ನಗರದ ಹೊರವಲಯದ ಅಡ್ಯಾರು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್ ಮೆಂಟ್‌ನಲ್ಲಿ ಶನಿವಾರದಿಂದ ಆರಂಭಗೊಂಡ ಸೈನ್-ಟೆಕ್ನಾಲಜಿ-ಮ್ಯಾನೇಜ್‌ಮೆಂಟ್ ಕುರಿತ 'ಸಹ್ಯಾದ್ರಿ ಸಮಾವೇಶ'ದಲ್ಲಿ ಅವರು ಮಾತನಾಡಿದರು.

ಪ್ರಸಕ್ತ ಸ್ಥಿತಿಯಲ್ಲಿ ಭಾರತ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಮೂಲ ವಿಜ್ಞಾನದ ಕುರಿತು ಸರಕಾರ ಹಾಗೂ ವಿದ್ಯಾರ್ಥಿಗಳು ಆಸಕ್ತಿ ತೋರಿಸುತ್ತಿಲ್ಲ. ಇದರಿಂದ ವಿಶ್ವದ ಅನೇಕ ಪ್ರತಿಭೆಗಳು ವಿಜ್ಞಾನದಿಂದ ವಿಮುಖರಾಗುತ್ತಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಆಡಳಿತ ಮತ್ತು ರಾಜಕಾರಣಿಗಳು ಹೆಚ್ಚಿನ ಗಮನ ಹರಿಸಬೇಕೆಂದು ಎಂದರು.

ರಸಾಯನ ಶಾಸ್ತ್ರ ದಲ್ಲಿ ನೋಬೆಲ್ ಪ್ರಶಸ್ತಿ ಪಡೆದ ಅಡಾ ಈ ಎನೋಥ್ ಮಾತನಾಡಿ, ಭಾರತೀಯ ವಿಜ್ಞಾನಿಗಳಲ್ಲಿ ಅಪಾರ ಜ್ಞಾನವಿದೆ. ಅವರ ಧೈರ್ಯ ಕೂಡ ಮೆಚ್ಚುವಂತದ್ದೇ. ಅದರೂ ಅವರು ಸೌಜನ್ಯದಲ್ಲಿ ಎತ್ತಿದ ಕೈ. ಜೀವಕೋಶಗಳ ಸಂಶೋಧನಾ ಕ್ಷೇತ್ರದ ಭಾರತೀಯ ವಿಜ್ಞಾನಿ ಜಿ. ಎನ್. ರಾಮಚಂದ್ರನ್ ಅವರ ಕೊಡುಗೆ ಅಪಾರವಾದದ್ದು. ನನ್ನ ಪಿಎಚ್‌ಡಿ ಅಧ್ಯಯನಕ್ಕೆ ರಾಮಚಂದ್ರನ್ ಅವರ ಸಂಶೋಧನಾ ವರದಿ ಬಹಳಷ್ಟು ಸಹಕಾರಿಯಾಗಿದೆ ಎಂದು ಅವರು ನುಡಿದರು.

ಅಮೆರಿಕದಲ್ಲಿ ನಡೆದ ವಿಜ್ಞಾನ ಕಾಂಗ್ರೆಸ್ ಅಧಿವೇಶನದಲ್ಲಿ ನನ್ನ ವಾದಕ್ಕೆ ಮನ್ನಣೆ ನೀಡುವ ಮೂಲಕ ರಾಮಚಂದ್ರನ್ ಅವರ ಹಿರಿಮೆಯನ್ನು ಮೆರೆದರು ಎಂದು ನೋಬೆಲ್ ವಿಜೇತೆ ಅಡಾ ಸ್ಮರಿಸಿದರು.

ಮಂಗಳೂರು ರಾಮಕೃಷ್ಣ ಮಠದ ಜಿತಕಾಮಾನಂದಜಿ ಸ್ವಾಮೀಜಿ ದೀಪ ಬೆಳಗಿಸಿ ಸಮಾವೇಶವನ್ನು ಉದ್ಘಾಟಿಸಿದರು. ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ನಿರ್ದೇಶಕ ಡಾ. ಡಿ.ಎಲ್. ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಅಲಹಾಬಾದ್ ಐಐಐಟಿ ಮಾಜಿ ನಿರ್ದೇಶಕ ಎಂ.ಡಿ. ತಿವಾರಿ, ಮುಂಬೈನ ಅಲ್‌ಕಾರ್ಗೋ ಲಾಜಿಸ್ಟಿಕ್‌ನ ಅಧ್ಯಕ್ಷ ಶಶಿಕಿರಣ್ ಶೆಟ್ಟಿ ಉಪಸ್ಥಿತರಿದ್ದರು. ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಪ್ರಿನ್ಸಿಪಾಲ್ ಡಾ. ಉಮೇಶ್ ಎಂ. ಭುಶಿ ಸ್ವಾಗತಿಸಿದರು. ಭಂಡಾರಿ ಫೌಂಡೇಶನ್‌ನ ಅಧ್ಯಕ್ಷ ಮಂಜುನಾಥ ಭಂಡಾರಿ ಪ್ರಸ್ತಾವಿಕ ಮಾತನಾಡಿದರು. ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಎಂಬಿಎ ನಿರ್ದೇಶಕ ಡಾ. ವಿಶಾಲ್ ಸಮರ್ಥ ವಂದಿಸಿದರು.



### ವಿಜ್ಞಾನ- ತಂತ್ರಜ್ಞಾನ ಇಡೀ ವಿಶ್ವವನ್ನೇ ಬದಲಾಯಿಸಿದೆ: ಸಚಿವ ರಾಯರೆಡ್ಡಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಡೀ ವಿಶ್ವವನ್ನೇ ಬದಲಾಯಿಸಿದೆ. ಮಾನವ ಜೀವನ ಮತ್ತಷ್ಟು ಸುಲಭವಾಗಿದೆ. ಮನುಷ್ಯರಿಗೆ ವಿವಿಧ ಸ್ತರಗಳಲ್ಲಿ ಇದು ನೆರವಿಗೆ ಬಂದಿದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯ ರೆಡ್ಡಿ ಹೇಳಿದರು. ಯುವ ಮನಸ್ಸಿಗೆ ಪ್ರಚೋದನೆ ನೀಡುವ ನಿಟ್ಟಿನಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಹಮ್ಮಿಕೊಂಡಿರುವ ಈ ಸಮಾವೇಶ ಬಹಳ ಉಪಯುಕ್ತವಾದದ್ದು. ಸಮಾವೇಶದಲ್ಲಿ 32 ತಾಂತ್ರಿಕ ಅಧಿವೇಶನಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದರು.

### ದೇವಾಲಯ, ಬಾಲಿವುಡ್ ಸಿನಿಮಾ ಮೆಚ್ಚಿದ ನೋಬೆಲ್ ವಿಜ್ಞಾನಿ ಅಡಾ

ನಾನು ಭಾರತವನ್ನು ಬಹಳಷ್ಟು ಪ್ರೀತಿಸುತ್ತೇನೆ. ವಿಜ್ಞಾನವನ್ನು ಕೂಡ ಪ್ರೀತಿಸುತ್ತೇನೆ. ಭಾರತೀಯ ದೇವಾಲಯಗಳು ಹಾಗೂ ಬಾಲಿವುಡ್ ಸಿನಿಮಾಗಳು ನನಗೆ ಅಚ್ಚುಮೆಚ್ಚು ಎಂದು ನೋಬೆಲ್ ಪ್ರಶಸ್ತಿ ವಿಜೇತೆ ಅಡಾ ಈ ಎನೋಥ್ ಹೇಳಿದರು.

ಭಾನುವಾರ, ಜನವರಿ 7, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 7 | ಪುಟ 22 + 4 + 4
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಮುಕ್ತಛಂದ
ಸಂತೇಶಿವರದಲ್ಲಿ ಭೈರಪ್ಪನವರ ಬಾಲ್ಯ ಹುಡುಕುತ್ತಾ...



ಪರಿವರ್ತನಾ ಯಾತ್ರೆಗೆ ಶಾಸಕ ಆನಂದ್ ಸಿಂಗ್ ಗೈರು 5

ಕಿರುಕುಳ ಆರೋಪ

ಬರಲಿದೆ ಶರವೇಗದ ಅಂತರ್ಜಾಲ ಸೇವೆ 8

ಭಯದ ನೆರಳಲ್ಲಿ ಮಲೆಕುಡಿಯರ ಬದುಕು 8



ಮಂಗಳೂರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆರಂಭವಾದ ಐದು ದಿನಗಳ 'ಸಹ್ಯಾದ್ರಿ ಸಮ್ಮೇಳನ'ವನ್ನು ರಾಮಕೃಷ್ಣ ಮಠದ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್ ಉದ್ಘಾಟಿಸಿದರು. ಪ್ರಜಾವಾಣಿ ಚಿತ್ರ

# 'ಯುವ ಮನಸ್ಸಿನಲ್ಲಿ ವಿಜ್ಞಾನವನ್ನು ಬಿತ್ತಿ'

ಪ್ರಜಾವಾಣಿ ವಾರ್ತೆ

ಮಂಗಳೂರು: ದೇಶದ ಭವಿಷ್ಯವಾಗಿರುವ ಯುವ ಮನಸ್ಸುಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು ಅತ್ಯಂತ ಅವಶ್ಯಕವಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಹೇಳಿದರು.

ನಗರದ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆರಂಭವಾದ ಐದು ದಿನಗಳ ವಿಜ್ಞಾನ, ತಂತ್ರಜ್ಞಾನ, ಉದ್ಯಮಾಡಳಿತ ಕುರಿತಾದ ಸಹ್ಯಾದ್ರಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾವುದೇ ದೇಶದ ಅಭಿವೃದ್ಧಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬಹುಮುಖ್ಯ ಪಾತ್ರ ವಹಿಸುತ್ತದೆ. ತಂತ್ರಜ್ಞಾನದಿಂದ ಹಲವಾರು ಸುಧಾರಣೆಗಳು ಆಗಿವೆ. ಕಳೆದ ಹಲವು ವರ್ಷಗಳಲ್ಲಿ ಆಗಿರುವ ಕ್ರಾಂತಿಕಾರಿ ಆವಿಷ್ಕಾರಗಳಿಂದಾಗಿ ಜೀವನ ನಿರ್ವಹಣೆ ಸುಲಭವಾಗಿದೆ ಎಂದು ತಿಳಿಸಿದರು.

ದೇಶದ ಪ್ರಗತಿಗೆ ಕೈಜೋಡಿಸುವ ಉದ್ದೇಶದಿಂದ ಯುವ ಜನಾಂಗವನ್ನು ವಿಜ್ಞಾನದತ್ತ ಆಕರ್ಷಿಸುವ ಕೆಲಸ ಮಾಡಬೇಕಾಗಿದೆ. ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ವಿಜ್ಞಾನ ಸಮ್ಮೇಳನ ಹಮ್ಮಿಕೊಳ್ಳುವ ಮೂಲಕ ಉದಾತ್ತ ಕೆಲಸವನ್ನು ಮಾಡಿದೆ ಎಂದು ಹೇಳಿದರು.

3ನೇ ಪುಟ ನೋಡಿ

## 'ಯುವ ಮನಸ್ಸಿನಲ್ಲಿ ವಿಜ್ಞಾನವನ್ನು ಬಿತ್ತಿ'

ಒಂದನೇ ಪುಟದಿಂದ

ಸದ್ಯದಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರ ಕೆಲಸ ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎಂ.ಆರ್.ಸೀತಾರಾಮ್ ಮಾದರಿಗಳ ಪ್ರದರ್ಶನ ಉದ್ಘಾಟಿಸಿದರು. ರಾಮಕೃಷ್ಣ ಮಠದ ಸ್ವಾಮಿ ಜಿತಕಾಮಾನಂದಜಿ ಮಹಾರಾಜ್ ಜ್ಯೋತಿ ಬೆಳಗಿದರು.

ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ ಮಾತನಾಡಿ, ಅಲಹಾಬಾದ್ ಐಐಐಟಿಯಲ್ಲಿ ನಡೆದ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಿದ್ದ ದಿನದಿಂದಲೂ ಸಹ್ಯಾದ್ರಿಯಲ್ಲಿ ಇಂತಹ ಸಮ್ಮೇಳನ ಹಮ್ಮಿಕೊಳ್ಳುವ ಯೋಚನೆ ಆರಂಭವಾಗಿತ್ತು. ಅಲಹಾಬಾದ್ ಐಐಐಟಿಯ ಮಾಜಿ ನಿರ್ದೇಶಕ ಡಾ. ಎಂ.ಡಿ. ತಿವಾರಿ ಅವರ ನೆರವಿನಿಂದ ಇದು ಸಾಕಾರಗೊಂಡಿದೆ ಎಂದು ತಿಳಿಸಿದರು.

ಮೊದಲ ಬಾರಿಗೆ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳು, ಜಗತ್ತಿನ ವಿವಿಧ ದೇಶಗಳ ಹೆಸರಾಂತ ವಿಜ್ಞಾನಿಗಳನ್ನು ಒಂದೆಡೆ ಸೇರಿಸುವ ಮೂಲಕ ಈ ಭಾಗದ ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಎಂಬಿಎ ಕಾಲೇಜು ವಿದ್ಯಾರ್ಥಿಗಳಿಗೆ ಸಂವಾದ, ಚರ್ಚಾಗೋಷ್ಠಿಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ ಎಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಉಮೇಶ್ ಭೂಷಿ ಸ್ವಾಗತಿಸಿದರು. ಸಮ್ಮೇಳನದ ಸಂಚಾಲಕ ಡಾ.ಮಂಜುನಾಥ ಪ್ರಾಸ್ತಾವಿಕವಾಗಿ ಮಾತನಾಡಿದರು. ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳಾದ ಅಡಾ ಈ ಎನೋಥ್, ಸರ್ಜ್ ಹಾರೊಕೆ, ಅಲಹಾಬಾದ್ ಐಐಐಟಿಯ ಮಾಜಿ ನಿರ್ದೇಶಕ ಎಂ.ಡಿ. ತಿವಾರಿ, ಆಲ್ ಕಾರ್ಗೋ ಲಾಜಿಸ್ಟಿಕ್ ಅಧ್ಯಕ್ಷ ಶಶಿಕಿರಣ್ ಶೆಟ್ಟಿ, ಸಹ್ಯಾದ್ರಿ ಸಂಸ್ಥೆ ನಿರ್ದೇಶಕ ಡಾ. ಡಿ.ಎಲ್. ಪ್ರಭಾಕರ್ ವೇದಿಕೆಯಲ್ಲಿದ್ದರು. ನಂತರ ವಿದ್ಯಾರ್ಥಿಗಳು ಹಾಗೂ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಭಾನುವಾರ, ಜನವರಿ 7, 2018 | ಮಂಗಳೂರು | ₹ 5.00 | ಸಂಪುಟ 20 | ಸಂಚಿಕೆ 7 | ಪುಟ 22 + 4 + 4
www.prajavani.net
/prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಮುಕ್ತಛಂದ
ಸಂತೇಶಿವರದಲ್ಲಿ ಭೈರಪ್ಪನವರ ಬಾಲ್ಯ ಹುಡುಕುತ್ತಾ...

ಪರಿವರ್ತನಾ ಯಾತ್ರೆಗೆ ಶಾಸಕ ಆನಂದ್ ಸಿಂಗ್ ಗೈರು 5

ಕಿರುಕುಳ ಆರೋಪ

ಬರಲಿದೆ ಶರವೇಗದ ಅಂತರ್ಜಾಲ ಸೇವೆ 8


ಭಯದ ನೆರಳಲ್ಲಿ ಮಲೆಕುಡಿಯರ ಬದುಕು 8

ಸುದ್ದಿ 2 ನಿಮಿಷ

# ‘ಮೂಲವಿಜ್ಞಾನಕ್ಕೆ ಪ್ರೋತ್ಸಾಹ ನೀಡಿ’

ಮಂಗಳೂರು: ‘ಮೂಲವಿಜ್ಞಾನವೇ ಎಲ್ಲ ಆವಿಷ್ಕಾರಗಳಿಗೆ ಬುನಾದಿಯಾಗಿದ್ದು, ಮೂಲ ವಿಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುವ ಅವಶ್ಯಕತೆ ಇದೆ’ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ಭೌತವಿಜ್ಞಾನಿ ಸರ್ಜ್ ಹೊರಾಕೆ ಹೇಳಿದರು.

ನಗರದ ಸಹ್ಯಾದ್ರಿ



ಕಾಲೇಜಿನಲ್ಲಿ ಶುಕ್ರವಾರ ಆರಂಭವಾದ ವಿಜ್ಞಾನ, ತಂತ್ರಜ್ಞಾನ ಮತ್ತು ಉದ್ಯಮಾಡಳಿತ ಕುರಿತಾದ ಸಹ್ಯಾದ್ರಿ ಸಮ್ಮೇಳನದಲ್ಲಿ ಅವರು ಮಾತನಾಡಿದರು.

‘ಪ್ರಸಕ್ತ ಸ್ಥಿತಿಯಲ್ಲಿ ಭಾರತವೂ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಮೂಲವಿಜ್ಞಾನದತ್ತ ವಿದ್ಯಾರ್ಥಿಗಳು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ಅನೇಕ ಪ್ರತಿಭೆಗಳು ವಿಜ್ಞಾನದಿಂದ ವಿಮುಖವಾಗುತ್ತಿವೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ, ರಾಜಕಾರಣಿಗಳು ಗಮನ ನೀಡಬೇಕು’ ಎಂದು ಸಲಹೆ ನೀಡಿದರು.

THE NEW SUNDAY EXPRESS

PLUS 12 PAGES MAGAZINE

MANGALURU • SUNDAY • JANUARY 07, 2018 • ₹6.00 • PAGES 32 • CITY EDITION



**MUKKABAAZ: GAME OF THORNS**

Vineet Singh's story about a boxer leads Anurag Kashyap to make a film on the plight of sports in India


**TWINNING WITH REALISM**

Thimpu-based artists Tashi Dendup and Ugyen Samdrup, who call themselves Twinz, showcase their first-ever exhibition at Bikaner House



**HEALERS OF HEALTH DIVIDE**

Fifteen boat clinics on the Brahmaputra take quality healthcare to the isolated population in 13 districts of Assam



COVER STORY

**THE ART OF LOVING**

From a carefree child to a teenager often found in the company of saints, *Gurudev: On the Plateau of the Peak - The Life of Sri Sri Ravi Shankar*, penned by the spiritual master's sister, is an intimate account of his life. Exclusive excerpts

# 'GLOBAL WARMING IS THE BIGGEST CHALLENGE'

**EXPRESS NEWS SERVICE**
@Mangaluru

STUDENTS pursuing basic science should try to find solutions to global warming, health and other problems, stressed Prof Serge Haroche a nobel prize winner in Physics.

"Global warming is the biggest challenge and scientists along with representatives of government should redress this problem at the earliest," Prof Haroche stressed while addressing the gathering at Sahyadri conclave organised by Sahyadri college of Engineering and Management at Sahyadri campus on Saturday.

The youth in particular are drawn to entreprenurship. The youth should be motivated to pursue basic sciences, he stressed. Prof Ada E Yonath, Noble prize winner in Chemistry, recollected that how the Indian Physicist G N Ramachandran had apppreciated her research on 'Ribosome' and had further motivated her.

"Thus I have special respect for India and Indian scientists. I visited India for the first stime in 1970 and since then I am a regular visitor to India," she said. India in past five decades had made tremendous progress in science and technology. The goverment too is implementing schemes to motivate students to focus on science.

She lauded Sahyadri college of Engineering and Management for organising Sahyadri conclave and igniting a passion for research in science, technology and management. In facilitating an interaction between Nobel lauretes, international scientists and industrialists, students will be benefitted, she added.

## Mobile Planetarium

State government in order to make basic sciences attractive to high school students is all set to introduce mobile Planetarium.

This mobile Planetarium will visit all schools spread acorss state and in days to come would make a significant contribution to science and technology, Minister for Planning, Statistics, science and technology M R Seetharam said.

Swami Jitakamanandaji of Mangaluru Ramakrishna Math inaugurating the conclave said Sahyadri college of Engineering and Management is one among the top technical institutions in state. Bhandary Foundation Chairman Manjunath Bhandary said the five-day conclave was organised in order to ignite a passion for science among students.

"More than 1,200 students of high schools, PU college and PG institutions from this and other districts have been encouraged to participate in the conclave," he said and added that this is a memorable day for the institution. Sahyadri college of Engineering and Management Director D L Prabhakara presided over the programme. Former Director of IIT, Allahabad, M D Tiwari, Allcargo Logistics Founder and Chairman Shashikiran Shetty among others were also present. From Saturday onwards upto Wednesday (January 10), nobel laureates, scientists, management experts will engage in meaningful dialogue to create innovative products, bridge the gap between prototypes and world class products.

A science exhibition, demonstration of drones among others can be seen at the conclave to end on January 10.

> **More than 1,200 students of high schools, PU college and PG institutions from this and other districts have been encouraged to participate in the conclave**
>
> Manjunath Bhandary, Bhandary Foundation Chairman